ನತ್ಯಾಗ್ರಹದಲ್ಲಿ ಭಾಗವಹಿಸಿ ಅನೇಕ ಕಷ್ಟ ನಷ್ಟಗಳನ್ನು ಅನುಭವಿಸಿದ್ದಾರೆ. ಶ್ರೀ ನಂಜಯ್ಯ ಶೆಟ್ಟಿಯವರು ನಮಗೆ ಹೆಚ್ಚಿನ ಸೇವೆಯನ್ನು ಸಲ್ಲಿಸಿದ್ದಾರೆ. ತುಮಕೂರು ಜಿಲ್ಲೆಯಲ್ಲಿ ಹಿರಿಯ ಕಾಂಗ್ರೆಸ್ ಮನುಷ್ಯರು ಎಂದರೆ ಮದುಗಿರಿ ನಂಜಯ್ಯ ಶೆಟ್ಟಿಯವರು. ಇವರು ನಮ್ಮ ಹರಿಜನ ಸೇವಕ ಸಂಘಕ್ಕೆ ಮತ್ತು ಮಧುಗಿರಿಯಲ್ಲಿ ಹರಿಜನರಿಗಾಗಿ ಒಂದು ಹಾಸ್ಟೆಲನ್ನು ತೆರೆಯುವ ಸಂದರ್ಭದಲ್ಲಿ ಅಪೇಕ್ಷಣಾದ ಸೇವೆಯನ್ನೂ ಸಲ್ಲಿಸಿದ್ದಲ್ಲದೆ ನಮಗೆ ಹಣಸಹಾಯವನ್ನೂ ಮಾಡಿದರು. ಹರಿಜನ ವಿದ್ಯಾರ್ಥಿ ನಿಲಯಕ್ಕೆ ಯಾರೂ ಕಟ್ಟಡವನ್ನು ಕೊಡಲಿಲ್ಲ. ಆಗ ಶ್ರೀ ನಂಜಯ್ಯ ಶೆಟ್ಟಿಯವರ ಹತ್ತಿರ ಹೋಗಿ ನಮ್ಮ ಕಷ್ಟವನ್ನು ತಿಳಿಸಲಾಗಿ ತಾವೇ ಮುಂದೆ ಬಂದು ತಮ್ಮ ಕಟ್ಟಡದಲ್ಲಿ ವಿದ್ಯಾರ್ಥಿ ನಿಲಯವನ್ನು ನಡೆಸಲು ಅವಕಾಶ ಕೊಟ್ಟರು. ಆಗ ಕೆಲವರು ನೀವು ಹರಿಜನರಿಗೆ ಮನೆಯನ್ನು ಕೊಡಕೂಡದಾಗಿತ್ತು, ನಿಮಗೆ ಸಮಾಜ ಬಹಿಷ್ಕಾರ ಹಾಕುತ್ತೇವೆ ಎಂದು ಬೆದರಿಸಿದರು. ಆಗ ಅವರು ನಾನು ಕಾಂಗ್ರೆಸ್ ಸಂಸ್ಥೆಗೆ ಸೇರಿದವನು, ಕಾಂಗ್ರೆಸ್ ತತ್ವಗಳನ್ನು ಅನುಸರಿಸುತ್ತಿದ್ದೇನೆ, ನಮಗೆ ಕೋಮುವಾದ ಭಾವನೆ ಇಲ್ಲ ಎಂದು ಹೇಳಿದರು. ಇಂಥ ಮಹನೀಯರು ಈ ಲೋಕವನ್ನು ಬಿಟ್ಟು ಪರಲೋಕಕ್ಕೆ ತೆರಳಿದ್ದಾರೆ. ಅವರ ಆತ್ಮಕ್ಕೆ ದೇವರು ಶಾಂತಿಯನ್ನೀಯಲಿ ಎಂದೂ ಮತ್ತು ಅವರ ಮನೆಯವರಿಗೆ ಉಂಟಾಗಿರುವ ಅಪಾರವಾದ ದುಃಖವನ್ನು ಭರಿಸಲು ಅವರಿಗೆ ಶಕ್ತಿಯನ್ನು ಕೊಡಲಿ ಎಂದೂ ಭಗವಂತನನ್ನು ಪ್ರಾರ್ಥಿಸುತ್ತೇವೆ.

ಶ್ರೀ ಟಿ. ಎ. ಮೂಡಲಗಿರಿಗೌಡ (ಕುಣಿಗಲ್) — ಸ್ವಾಮಿ, ಶ್ರೀ ನಂಜಯ್ಯ ಶೆಟ್ಟಿಯವರ ನಿಧನಪಾರ್ಶ್ವಯನ್ನು ಕೇಳಿ ವೈಯಕ್ತಿಕವಾಗಿ ನನಗೆ ಬಹಳ ವ್ಯಸನವುಂಟಾಗಿದೆ. ಶ್ರೀ ನಂಜಯ್ಯ ಶೆಟ್ಟರು ನನಗೆ 20 ವರ್ಷಗಳಿಂದ ಪರಿಚಯವಿದ್ದರು. ಅವರು ನಮ್ಮಾದು ಏಳೆಂಟು ವರ್ಷಗಳಕಾಲ ಅಸೆಂಬ್ಲಿಯಲ್ಲಿ ನನ್ನ ಜೊತೆಯಲ್ಲಿದ್ದರು. ಅವರು ಕಾಂಗ್ರೆಸ್ ಪಕ್ಷಕ್ಕೆ ಸೇರಿದವರು. ಕಾಂಗ್ರೆಸ್ ಪಕ್ಷದಲ್ಲಿ ನಂತರಯಗಳೇನಾದರೂ ಬಂದರೆ ಅಂಥ ಸಂದರ್ಭಗಳಲ್ಲಿ ನಂಜಯ್ಯ ಶೆಟ್ಟರು ಸಭೆಯವರೆಲ್ಲ ಮೆಚ್ಚುವಂತೆ ತೂಕವಾದ ನಿರ್ಧಾರವನ್ನೂ ತೀರ್ಮಾನವನ್ನೂ ಹೇಳುತ್ತಿದ್ದರು. ಅಂಥ ವ್ಯಕ್ತಿಗಳು ಮಧುಗಿರಿ ಟೌನ್‌ನಲ್ಲಿ ಆ ಊರಿಗೆಲ್ಲ ಒಬ್ಬ ಯಜಮಾನರಿದ್ದ ಹಾಗೆ, ಯಜಮಾನಿಕೆಯನ್ನು ವಹಿಸಿಕೊಂಡಿದ್ದರೋ ಏನೋ ಎನ್ನುವಂತೆ 30 ಸಹಸ್ರ ಪ್ರಜಾಸಂಖ್ಯೆ ಇರತಕ್ಕ ಆ ಊರಿನಲ್ಲಿ ಜೀವನವನ್ನು ನಡಿಸಿಕೊಂಡು ಬಂದರು. ಅವರು ಸರ್ವರಲ್ಲಿಯೂ ವಿಶ್ವಾಸವನ್ನು ಗಳಿಸಿಕೊಂಡಿದ್ದರು ಎಂದು ತಿಳಿಸಬೇಕಾಗಿದೆ. ಮಧುಗಿರಿಯಲ್ಲಿ ಕಳೆದ ಸಾಲಿನಲ್ಲಿ ನಡೆದ ಎಂ.ಪಿ.ಸಿ.ಸಿ. ಅಧಿವೇಶನ ನಡೆಯಿತು. ಆ ಕಾಲದಲ್ಲಿ ಆ ಸಮಿತಿಯ ಫೈನಾನ್ಸ್‌ರಾಗಿ, ಅವರಿಗೆ ವಯಸ್ಸಾಗಿ ದೇಹಸ್ಥಿತಿ ಸರಿಯಾಗಿಲ್ಲದೇ ಇದ್ದರೂ ಕೂಡ ಕಾಂಗ್ರೆಸ್‌ನಲ್ಲಿ ಅವರಿಗಿದ್ದ ಭಕ್ತಿ, ದೇಶಪ್ರೇಮ, ಇವುಗಳಿಂದ ಅವರು ಅಲ್ಲಿ ಬಂದು ಕುಳಿತು ಮಾತನಾಡಿದ್ದನ್ನು ಕಂಡು ಅಲ್ಲಿ ಸೇರಿದ್ದ ಜನರಿಗೆ ಬಹಳ ಆಶ್ಚರ್ಯವಾಯಿತು, ಅಂಥ ದೇಶಭಕ್ತರು ಮತ್ತು ದೇಶದ ಸ್ವಾತಂತ್ರ್ಯಕ್ಕೋಸ್ಕರವಾಗಿ ಹೋರಾಡಿದವರು, ಮತ್ತು ಅಪ್ಪ ಹಿರಿಯರಾದವರು ನಮ್ಮಲ್ಲಿ ಇದ್ದುದು ಹೆಚ್ಚಿನ ವಿಷಯ. ನಮಗೆಲ್ಲರಿಗೂ ಕೂಡ ಸಮಯದಲ್ಲಿ ತಿಳಿವಳಿಕೆ ಮತ್ತು ಬುದ್ಧಿಯನ್ನು ಹೇಳತಕ್ಕ ಯೋಗ್ಯತೆ ಅವರಿಗಿತ್ತು ಎಂದು ಭಾವಿಸುತ್ತೇನೆ. ಅಂಥ ಮಹನೀಯರು ನಮ್ಮನ್ನಗಲಿ ಹೋಗಿದ್ದಾರೆ. ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನುಂಟುಮಾಡಲಿ ಎಂದು ನಾನೂ ಸಹ ಇದರಲ್ಲಿ ಭಾಗಿಯಾಗುತ್ತೇನೆ.

Mr SPEAKER.—The Chair associates itself with the sentiments and feelings expressed by the Hon'ble Minister Sri A. G. Ramachandra Rao and the other Hon'ble Members who followed him. I request the Hon'ble Members to rise up for a minute as a mark of respect to the departed soul.

The House stood in silence for a minute.

Member's representations.

Sri S. GOPALA GOWDA (Sagar—Hosanagar).—Sir, I would like to bring to the notice of the Chair that the Hon'ble Chief Minister yesterday made a statement on the floor of the House with regard to the R.M.D.C. He stated that he was to make a statement, but in view of the fact that the R.M.D.C. had a case pending in a court of law, he said that it would be *sub judice* and that he could not make such a statement. He observed that some of the Members who spoke on the Bill and about the Prize Competitions of the R.M.D.C. have made reckless allegations and so on. In this matter, my contention is, at this time the Prize Competition Amendment Bill was introduced, myself and some of the Members I think made some relevant remarks about R.M.D.C. I do not think our discussion in any way was *sub judice*. We only requested the Government to come out with a factual report about R.M.D.C. affairs. So, in my opinion, the contention of the Chief Minister that the case about the R.M.D.C. is pending in a court of law would be *sub judice* and that he would not make a statement with regard to the affairs of the R.M.D.C. is untenable. I would request the Chair to give a statement clarifying the situation whether it would be *sub judice* or not.

Mr. SPEAKER.—Next item of the Agenda.